ಕರ್ನಾಟಕ ಸರ್ಕಾರ

Department of Collegiate Education

Government of Karnataka

ಸಂಖ್ಯೆ:ಕಾಶಿಇ/01/2016-17/ಎನ್.ಪಿ.ಎಸ್./ಹ.ಪಾ.ವಿ.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು. ದಿನಾಂಕ: 01/12/2016.

## ಸುತ್ತೋಲೆ

ವಿಷಯ:- ಎನ್.ಪಿ.ಎಸ್ ನೌಕರರ ಸರಿಯಾದ ಮೂಲವೇತನ ಮತ್ತು ಇತರ ವಿವರಗಳೊಂದಿಗೆ ಅಪ್ರೂವ್ ಮಾಡಲಾದ ಷೆಡ್ಯೂಲ್ IVಮತ್ತು V ಗಳನ್ನು ಎನ್.ಪಿ.ಎಸ್.ಘಟಕಕ್ಕೆ ಸಲ್ಲಿಸುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು ಇವರ ದಿನಾಂಕ:28/11/2016ರ ಪತ್ರ
ಸಂ: ಖ.ನಿ./ಎನ್.ಪಿ.ಎಸ್./14/2010-11.

*****

ಕರ್ನಾಟಕ ಸರ್ಕಾರವು ದಿ:01/04/2006ರಿಂದ ಎನ್.ಪಿ.ಎಸ್.ಅನ್ನು ಜಾರಿಗೆ ತಂದಿದ್ದು, ಎನ್.ಪಿ.ಎಸ್.ವಂತಿಗೆಯನ್ನು ದಿ:01/04/2010ರಿಂದ ಕಟಾವು ಮಾಡಲು ಪ್ರಾರಂಭಿಸಲಾಗಿರುತ್ತದೆ. ದಿನಾಂಕ:01/04/2006 ಅಥವಾ ನೌಕರರು ಸೇವೆಗೆ ಸೇರಿದ ದಿನಾಂಕದಿಂದ ನೌಕರರ ವೇತನದಿಂದ ಎನ್.ಪಿ.ಎಸ್. ರೆಗ್ಯೂಲರ್ ವಂತಿಗೆ ಕಟಾವಣೆ ಆದ ಹಿಂದಿನ ತಿಂಗಳವರೆವಿಗಿನ ಅವಧಿಯನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಲಾಗಿದ್ದು, ಡಿ.ಡಿ.ಓ.ಗಳಿಂದ ಬ್ಯಾಕ್‌ಲಾಗ್‌ಗೆ ಸಂಬಂಧಿಸಿದಂತೆ ಷೆಡ್ಯೂಲ್ IVಮತ್ತು V ಗಳು ಎನ್.ಪಿ.ಎಸ್.ಘಟಕದಲ್ಲಿ ಸ್ವೀಕೃತಗೊಂಡ ನಂತರ ಬ್ಯಾಕ್‌ಲಾಗ್‌ನ ಸರ್ಕಾರದ ವಂತಿಗೆ ಶೇಕಡಾ 8 ರಷ್ಟು ಬಡ್ಡಿಯೊಂದಿಗೆ ನೌಕರರ ಪ್ರಾನ್ ಖಾತೆಗೆ ಜಮೆ ಮಾಡಲಾಗುತ್ತಿತ್ತು.

ಆದರೆ ಅನೇಕ ಡಿ.ಡಿ.ಓ.ಗಳಿಂದ ಷೆಡ್ಯೂಲ್ IVಮತ್ತು V ಗಳು ಬರದೇ ಇದ್ದುದರಿಂದ ಹಾಗೂ ತಪ್ಪಾದ ಷೆಡ್ಯೂಲ್‌ಗಳನ್ನು ಸಲ್ಲಿಸಿದ್ದರಿಂದ ಸರ್ಕಾರದ ಬ್ಯಾಕ್‌ಲಾಗ್‌ನ್ನು ನೌಕರರ ಪ್ರಾನ್ ಖಾತೆಗೆ ಪಾವತಿಸಲು ವಿಳಂಬವಾಗುತ್ತಿದ್ದ ಕಾರಣ ಬ್ಯಾಕ್‌ಲಾಗ್ ಮೇಲಿನ ಬಡ್ಡಿಯನ್ನು ದಿನಾಂಕ:30/06/2016 ರ ಅಂತ್ಯಕ್ಕೆ ಸ್ಥಗಿತಗೊಳಿಸಲು ಆದೇಶಿಸಲಾಗಿದೆ. ನಂತರ ಸರ್ಕಾರಿ ಬ್ಯಾಕ್‌ಲಾಗ್ ವಂತಿಗೆ ಮತ್ತು ಬ್ಯಾಕ್‌ಲಾಗ್ ವಂತಿಗೆ ಮೇಲೆ ದಿನಾಂಕ:30/06/2016ರವರೆಗೆ ಸ್ಥಗಿತಗೊಳಿಸಲು ಸರ್ಕಾರದ ಹಂತದಲ್ಲಿ ಚರ್ಚೆ ನಡೆಸಲಾಗುತ್ತಿರುತ್ತದೆ.

ಸರ್ಕಾರದ ತೀರ್ಮಾನದ ನಂತರ ನೌಕರರಿಂದ ಬ್ಯಾಕ್‌ಲಾಗ್ ವಂತಿಗೆ ಮತ್ತು ಬಡ್ಡಿ ಪಾವತಿಗೆ ಕೋರಿಕೆ ಬಂದಲ್ಲಿ ಅದನ್ನು ಇತ್ಯರ್ಥಪಡಿಸುವುದಕ್ಕೆ ಸಂಬಂಧಪಟ್ಟ ಡಿ.ಡಿ.ಓ.ಗಳು ವೈಯಕ್ತಿಕ ಜವಾಬ್ದಾರರಾಗಿರುತ್ತಾರೆಂದು ಉಲ್ಲೇಖ ಪತ್ರದಲ್ಲಿ ತಿಳಿಸಿ ಕೂಡಲೇ ಎನ್.ಪಿ.ಎಸ್ ನೌಕರರ ಸರಿಯಾದ ಮೂಲವೇತನ ಮತ್ತು ಇತರ ವಿವರಗಳೊಂದಿಗೆ ಅಪ್ರೂವ್ ಮಾಡಲಾದ ಷೆಡ್ಯೂಲ್ IVಮತ್ತು V ಗಳನ್ನು ಎನ್.ಪಿ.ಎಸ್.ಘಟಕಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

**ಸರ್ಕಾರದ ಪತ್ರವನ್ನು ಈ ಸುತ್ತೋಲೆಗೆ ಅನುಬಂಧಿಸಿದ್ದು, ಇಲಾಖಾವ್ಯಾಪ್ತಿಯ ಎಲ್ಲಾ ಡಿ.ಡಿ.ಓ.ಗಳು ತಮ್ಮ ಕಛೇರಿ/ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್.ಪಿ.ಎಸ್.ನೌಕರರ ಸರಿಯಾದ ಮೂಲವೇತನ ಮತ್ತು ಇತರ ವಿವರಗಳೊಂದಿಗೆ ಅಪ್ರೂವ್ ಮಾಡಲಾದ ಷೆಡ್ಯೂಲ್ IVಮತ್ತು V ಗಳನ್ನು ಎನ್.ಪಿ.ಎಸ್.ಘಟಕಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ.** ಈ ಬಗ್ಗೆ ಉದಾಸೀನತೆ ತೋರಿದಲ್ಲಿ ಸಂಬಂಧಿಸಿದ ಡಿ.ಡಿ.ಓ.ಗಳೇ ನೇರ ಜವಾಬ್ದಾರರಾಗಿರುತ್ತಾರೆಂದು ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು.

ಇವರಿಗೆ

1. ಕಾಲೇಜು ಶಿಕ್ಷಣ ಇಲಾಖಾವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ
2. ಇಲಾಖಾವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
3. ಲೆಕ್ಕಾಧಿಕಾರಿಗಳು, ಕಾಲೇಜು ಶಿಕ್ಷಣ ಕೇಂದ್ರಕಛೇರಿ, ಬೆಂಗಳೂರು

ಪ್ರತಿಯನ್ನು

1. ಕಾಲೇಜು ಶಿಕ್ಷಣ ಆಯುಕ್ತರ /ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ ಆಪ್ತಶಾಖೆಗೆ ಮಾಹಿತಿಗಾಗಿ
2. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಎನ್.ಪಿ.ಎಸ್.ಘಟಕ, 8ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು ಇವರಿಗೆ ಮಾಹಿತಿಗಾಗಿ

ಕರ್ನಾಟಕ ಸರ್ಕಾರ

ಖಜಾನೆ ನಿರ್ದೇಶನಾಲಯ

ಸಂ.:ಖ.ನಿ/ಎನ್.ಪಿ.ಎಸ್/14/2010-11

ನೂತನ ಪಿಂಚಣಿ ಯೋಜನೆ ಘಟಕ
8ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ
ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ : 28.11.2016.

**The Commissioner of Collegiate Education,**
**Sheshadri Road,**
**Bangalore-01.**

ದಿನಾಂಕ 29 NOV 2016

ಮಾನ್ಯರೆ,

ವಿಷಯ : ಎನ್.ಪಿ.ಎಸ್. ನೌಕರರ ಸರ್ಕಾರಿ ಬ್ಯಾಕ್‌ಲಾಗ್‌ಗೆ ಸಂಬಂಧಿಸಿದಂತೆ ಸಭೆಯನ್ನು ಆಯೋಜಿಸುತ್ತಿರುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಆದೇಶ ಸಂ : ಎಫ್‌ಡಿ(ವಿ) 04 ಪಿಇಟಿ 2005, ದಿನಾಂಕ : 31.03.2006.
2. ಸರ್ಕಾರದ ಆದೇಶ ಸಂ : ಎಫ್‌ಡಿ(ವಿ) 28 ಪಿಇಎನ್ 2009 ದಿನಾಂಕ : 29.03.2010.
3. ಸುತ್ತೋಲೆ ಸಂ : ಎಫ್‌ಡಿ(ವಿ) 1 ಪಿಇಎನ್ 2010, ದಿನಾಂಕ : 10.01.2012.
4. ಈ ಕಛೇರಿಯ ಸಮ ಸಂಖ್ಯೆ ಪತ್ರದ ದಿನಾಂಕ : 12.09.2014.
5. ಸರ್ಕಾರದ ಆದೇಶ ಸಂ : ಎಫ್‌ಡಿ (ಎಸ್‌ಪಿಎಲ್) 176 ಪಿಇಎನ್ 2014, ದಿನಾಂಕ : 05.05.2016.

* * * * *

ಕರ್ನಾಟಕ ಸರ್ಕಾರವು ದಿನಾಂಕ : 01.04.2006 ರಿಂದ ಎನ್.ಪಿ.ಎಸ್. ಅನ್ನು ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿರುತ್ತದೆ. ಆದರೆ ಎನ್.ಪಿ.ಎಸ್. ವಂತಿಗೆಯನ್ನು ನೌಕರರ ವೇತನದಿಂದ ದಿನಾಂಕ : 01.04.2010 ರಿಂದ ಕಟಾವು ಮಾಡಲು ಆರಂಭಿಸಲಾಗಿರುತ್ತದೆ. ದಿನಾಂಕ : 01.04.2006 ಅಥವಾ ನೌಕರರು ಸೇವೆಗೆ ಸೇರಿದ ದಿನಾಂಕದಿಂದ ನೌಕರರ ವೇತನದಿಂದ ಎನ್.ಪಿ.ಎಸ್. ರೆಗ್ಯೂಲರ್ ವಂತಿಗೆ ಕಟಾವಣೆ ಆದ ಹಿಂದಿನ ತಿಂಗಳಿನವರೆಗಿನ ಅವಧಿಯನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಲಾಗಿದೆ. ಉಲ್ಲೇಖ (2) ರಲ್ಲಿನ ಸರ್ಕಾರದ ಆದೇಶದನ್ವಯ ಡಿಡಿಓಗಳಿಂದ ಬ್ಯಾಕ್‌ಲಾಗ್‌ಗೆ ಸಂಬಂಧಿಸಿದಂತೆ ಷೆಡ್ಯೂಲ್ IV ಮತ್ತು V ಗಳು ಎನ್.ಪಿ.ಎಸ್. ಘಟಕದಲ್ಲಿ ಸ್ವೀಕೃತಗೊಂಡ ನಂತರ ಬ್ಯಾಕ್‌ಲಾಗ್‌ನ ಸರ್ಕಾರದ ವಂತಿಗೆಯನ್ನು ಶೇ.8% ರಷ್ಟು ಬಡ್ಡಿಯೊಂದಿಗೆ ನೌಕರರ ಪ್ರಾನ್ ಖಾತೆಗೆ ಜಮೆ ಮಾಡಲಾಗುತ್ತಿತ್ತು.

ಅನೇಕ ಡಿಡಿಓಗಳಿಂದ ಷೆಡ್ಯೂಲ್ IV ಮತ್ತು V ಗಳು ಬರದೇ ಇದ್ದುದರಿಂದ ಹಾಗೂ ತಪ್ಪಾದ ಷೆಡ್ಯೂಲ್ ಗಳು ಬಂದಿದ್ದರಿಂದ, ಸರ್ಕಾರದ ಬ್ಯಾಕ್‌ಲಾಗ್‌ನ್ನು ನೌಕರರ ಪ್ರಾನ್ ಖಾತೆಗೆ ಪಾವತಿಸಲು ವಿಳಂಬವಾಗುತ್ತಿದ್ದ ಕಾರಣ, ಶೀಘ್ರ ಕ್ರಮಕ್ಕಾಗಿ ಬ್ಯಾಕ್‌ಲಾಗ್ ಪಾವತಿಗೆ ಬಾಕಿ ಇದ್ದ ನೌಕರರಿಗೆ ವೈಯಕ್ತಿಕವಾಗಿ ಪತ್ರಗಳನ್ನು ಕಳುಹಿಸಲಾಗಿತ್ತು. ಉಲ್ಲೇಖ (4) ರನ್ವಯ ಬ್ಯಾಕ್‌ಲಾಗ್ ವಂತಿಗೆ ಕುರಿತು ಇಲಾಖಾ ಮುಖ್ಯಸ್ಥರುಗಳಿಗೆ ದಿನಾಂಕ : 23.09.2014 ರಂದು ಸಭೆಯನ್ನು ಆಯೋಜಿಸಲಾಗಿತ್ತು.

ಸರ್ಕಾರಿ ಬ್ಯಾಕ್‌ಲಾಗ್‌ಗೆ ಸಂಬಂಧಿಸಿದಂತೆ ಷೆಡ್ಯೂಲ್ IV ಮತ್ತು V ಅನ್ನು ಎನ್.ಪಿ.ಎಸ್. ಘಟಕಕ್ಕೆ ಶೀಘ್ರವಾಗಿ ಸಲ್ಲಿಸುವಂತೆ ಸಭೆಯಲ್ಲಿ ಸೂಚಿಸಲಾಗಿತ್ತು. ಏಪ್ರಿಲ್ – 2015 ರಿಂದ ಎಲ್ಲಾ ಡಿಡಿಓ ಗಳ ಹೆಚ್.ಆರ್.ಎಂ.ಎಸ್. ಲಾಗಿನ್ ನಲ್ಲಿ ಬ್ಯಾಕ್‌ಲಾಗ್‌ನ ಸರ್ಕಾರದ ವಂತಿಗೆಗೆ ಬಡ್ಡಿ ನೀಡುವುದನ್ನು ನಿಲ್ಲಿಸಲಾಗುವುದೆಂದು, ಶೀಘ್ರ ಷೆಡ್ಯೂಲ್ IV ಮತ್ತು V ಗಳನ್ನು ಎನ್.ಪಿ.ಎಸ್. ಘಟಕಕ್ಕೆ ಕಳುಹಿಸಲು Alert Massage ಅನ್ನು ಪ್ರಕಟಿಸಲಾಗಿತ್ತು. ಈ ರೀತಿ ಬ್ಯಾಕ್‌ಲಾಗ್ ಇತ್ಯರ್ಥ ಪಡಿಸಲು ಡಿಡಿಓಗಳಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದ ಕಾರಣ, ಉಲ್ಲೇಖ (5) ರಲ್ಲಿ ಸರ್ಕಾರದ ಬ್ಯಾಕ್‌ಲಾಗ್ ಮೇಲಿನ ಬಡ್ಡಿಯನ್ನು ದಿನಾಂಕ : 30.06.2016 ರ ಅಂತ್ಯಕ್ಕೆ ಸ್ಥಗಿತಗೊಳಿಸಲು ಆದೇಶಿಸಲಾಗಿದೆ. ಆದಾಗ್ಯೂ ಸುಮಾರು **27,753** ನೌಕರರ ಷೆಡ್ಯೂಲ್ IV ಮತ್ತು V ಗಳನ್ನು ಇದುವರೆಗೂ ಸಲ್ಲಿಸಿರುವುದಿಲ್ಲ. ಆದುದರಿಂದ ಸರ್ಕಾರಿ ಬ್ಯಾಕ್‌ಲಾಗ್ ವಂತಿಗೆ ಮತ್ತು ಬ್ಯಾಕ್‌ಲಾಗ್ ವಂತಿಗೆ ಮೇಲೆ 30.06.2016 ರವರೆಗೆ ಬಡ್ಡಿ ನೀಡುವುದನ್ನು ಸ್ಥಗಿತಗೊಳಿಸಲು ಸರ್ಕಾರದ ಹಂತದಲ್ಲಿ ಚರ್ಚೆ ನಡೆಸಲಾಗುತ್ತಿದ್ದು, ಸರ್ಕಾರದಿಂದ ತೀರ್ಮಾನ ತೆಗೆದುಕೊಂಡ ನಂತರ ನೌಕರರಿಂದ ಸರ್ಕಾರದ ಬ್ಯಾಕ್‌ಲಾಗ್ ವಂತಿಗೆ ಮತ್ತು ಬಡ್ಡಿ ಪಾವತಿಗೆ ಕೋರಿಕೆ ಬಂದಲ್ಲಿ ಅದನ್ನು ಇತ್ಯರ್ಥಪಡಿಸುವುದಕ್ಕೆ ಸಂಬಂಧಪಟ್ಟ ಡಿಡಿಓಗಳು ವೈಯಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ. ಆದುದರಿಂದ ಇಲಾಖಾ ಮುಖ್ಯಸ್ಥರುಗಳು ತಮ್ಮ ಅಧೀನದ ಡಿಡಿಓ ಗಳಗೆ ತುರ್ತು ನಿರ್ದೇಶನ ನೀಡಿ ಸಂಪರ್ಕಿಸಿ ಕೂಡಲೇ ಸರಿಯಾದ ಮೂಲ ವೇತನ ಮತ್ತು ಇತರ ವಿವರಗಳೊಂದಿಗೆ ಅಪ್ರೂವ್ ಮಾಡಲಾದ ಷೆಡ್ಯೂಲ್ IV ಮತ್ತು V ಗಳನ್ನು ಎನ್.ಪಿ.ಎಸ್. ಘಟಕಕ್ಕೆ ಸಲ್ಲಿಸಲು ಅಂತಿಮ ಸೂಚನೆ ನೀಡಲು ಕೋರಿದೆ.

ಸರ್ಕಾರದ ಬ್ಯಾಕ್‌ಲಾಗ್ ಪಾವತಿಗೆ ಬಾಕಿ ಇರುವ ತಮ್ಮ ಇಲಾಖೆಯ ನೌಕರರ ಪಟ್ಟಿಯನ್ನು ಹಾಗೂ ಇನ್ನಿತರ ಎನ್.ಪಿ.ಎಸ್.ಗೆ ಸಂಬಂಧಿಸಿದ ಮಾಹಿತಿಯನ್ನು ಸಭೆಯಲ್ಲಿ ತಮ್ಮ ಮಾಹಿತಿಗಾಗಿ ಒದಗಿಸಲಾಗುವುದು. ಸದರಿ ಪಟ್ಟಿಯಲ್ಲಿನ ನೌಕರರುಗಳ ಸರಿಯಾದ ಷೆಡ್ಯೂಲ್ IV ಮತ್ತು V ಗಳನ್ನು ಜನರೇಟ್ ಮಾಡಿ ಎನ್.ಪಿ.ಎಸ್. ಘಟಕಕ್ಕೆ ಸಲ್ಲಿಸಲು ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳುವ ಬಗ್ಗೆ ಚರ್ಚಿಸಿ ಸಲಹೆ / ಸೂಚನೆಗಳನ್ನು ನೀಡುವ ಬಗ್ಗೆ ದಿನಾಂಕ : 06.12.2016 ರಂದು ಸಮಯ : ಬೆಳಿಗ್ಗೆ 10.30 ಕ್ಕೆ ಸ್ಥಳ : ವಿಕಾಸಸೌಧ, ಬೆಂಗಳೂರು ಇಲ್ಲಿ ಸಭೆ ಆಯೋಜಿಸಿದ್ದು, ಸದರಿ ಸಭೆಗೆ ತಮ್ಮ ಇಲಾಖೆಯ ಹಿರಿಯ ಅಧಿಕಾರಿ ಮತ್ತು ಹೆಚ್.ಆರ್.ಎಂ.ಎಸ್. ನೋಡಲ್ ಅಧಿಕಾರಿಗಳನ್ನು ತಪ್ಪದೇ ನಿಯೋಜಿಸಲು ಕೋರಲಾಗಿದೆ.

ತಮ್ಮ ನಂಬುಗೆಯ,

ನಿರ್ದೇಶಕರು,
ಖಜಾನೆ ನಿರ್ದೇಶನಾಲಯ
ಬೆಂಗಳೂರು.